ನಗರಾಭಿವೃದ್ಧಿ ಯೋಜನೆಯ ಬಗ್ಗೆ

೭೭೪ (೧೩೭೮) ಶ್ರೀ ಎ. ಕೆ. ಅಂತಕೃಷ್ಣ (ಶಿವಾಜಿನಗರ).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ಈ ಕೆಳಕಂಡ ನಗರಾಭಿವೃದ್ಧಿ ಯೋಜನೆಯ ಅಗತ್ಯಗಳನ್ನು ಪೂರೈಸಲು ವಿಶ್ವಬ್ಯಾಂಕ ಸುಮಾರು ೭೦೦ ಕೋಟಿ ರೂ.ಗಳನ್ನು ಮಂಜೂರು ಮಾಡಿದೆ ಎಂದು ನೀಡಲಾಗಿದೆ ?

೧) ನಗರ ಸಾರಿಗೆ, ೨) ನಿವೇಶನ ಮತ್ತು ಪ್ರದೇಶ ಅಭಿವೃದ್ಧಿ ಕಾರ್ಯ, ೩) ಸಾಮಾಜಿಕ ಮತ್ತು ಆರ್ಥಿಕವಾಗಿ ಹಿಂದುಳಿದ ವರ್ಗಗಳಿಗಾಗಿ, ೪) ಕರ್ನಾಟಕ ನೀರು ಸರಬರಾಜು ಕಾರ್ಯಕ್ರಮಗಳಿಗಾಗಿ,

೫) ನಗರ ವಸತಿ, ೬) ಕೊಳಚೆ ಪ್ರದೇಶ ನಿರ್ಮೂಲನ ಮತ್ತು ಪುನರ್ ವಸತಿ.

೭) ಸ್ವಚ್ಛತೆ ಮತ್ತು ಪರಿಸರ ಸುಧಾರಣೆ.

ಆ) ಹಾಗಾದರೆ ಅದು ಯಾವ ಹಂತದಲ್ಲಿದೆ ?

ಶ್ರೀ ವೀರೇಂದ್ರ ಪಾಟೀಲ್ (ಮುಖ್ಯ ಮಂತ್ರಿಗಳು).—
ಅ) ಈ ತರಹದ ಯಾವುದೇ ಪ್ರಸ್ತಾವನೆ ವಿಶ್ವಬ್ಯಾಂಕಿನಿಂದ ಸ್ವೀಕರಿಸಲಾಗಿಲ್ಲ.

ಆ) ಉದ್ಭವಿಸುವುದಿಲ್ಲ.

ಸರ್ಕಾರದಿಂದ ಕರ್ನಾಟಕ ಚಿತ್ರಕಲಾ ಪರಿಷತ್ತಿಗೆ ನೀಡಿರುವ ಅನುದಾನದ ಬಗ್ಗೆ

೭೭೫ (೧೩೬೪) ಶ್ರೀ ಪೆರಿಕಲ್ ಎಂ. ಮಲ್ಲಪ್ಪ ಮಾನ್ಯ ಶಿಕ್ಷಣ, ಯುವಜನ ಸೇವೆ, ಕ್ರೀಡೆ, ಕನ್ನಡ ಮತ್ತು ಸಂಸ್ಕೃತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ೧೯೮೮-೮೯, ೧೯೮೯-೯೦ರಲ್ಲಿ ಸರ್ಕಾರದಿಂದ ಕರ್ನಾಟಕ ಚಿತ್ರಕಲಾ ಪರಿಷತ್ತಿಗೆ ನೀಡಿರುವ ಅನುದಾನವೆಷ್ಟು ?

ಆ) ಕರ್ನಾಟಕ ಚಿತ್ರಕಲಾ ಪರಿಷತ್ತಿನ ವಿವಿಧ ಕಾರ್ಯಕ್ರಮಗಳಿಗೆ ಈಗ ನೀಡುತ್ತಿರುವ ಅನುದಾನ ಸಾಲದೆಂಬುದು ನಿಜವೇ ?

ಇ) ೧೯೯೦-೯೧ನೇ ಸಾಲಿನಲ್ಲಿ ಪರಿಷತ್‌ಗೆ ನೀಡುತ್ತಿರುವ ಅನುದಾನವನ್ನು ಸರ್ಕಾರ ಹೆಚ್ಚಿಸಲು ಕ್ರಮ ತೆಗೆದುಕೊಳ್ಳುವುದೇ ?

ಶ್ರೀ ಕೆ. ಹೆಚ್. ರಂಗನಾಥ್ (ಶಿಕ್ಷಣ, ಯುವಜನ ಸೇವೆ, ಕ್ರೀಡೆ, ಕನ್ನಡ ಮತ್ತು ಸಂಸ್ಕೃತಿ ಸಚಿವರು).—

ಅ) ೧೯೮೮-೮೯ ರೂ. ೭,೪೭,೦೦೦-೦೦
೧೯೮೯-೯೦ ರೂ. ೫,೪೫,೦೦೦-೦೦

ಆ) ಚಿತ್ರಕಲಾ ಪರಿಷತ್ತಿನವರು ಅನುದಾನ ಸಾಕಾಗುತ್ತಿಲ್ಲವೆಂದು ಹೇಳುತ್ತಾರೆ.

ಇ) ಅವರಿಗೆ ರಾಜ್ಯದ ಹಣಕಾಸಿನ ಪರಿಸ್ಥಿತಿಯನ್ನು ಗಣನೆಗೆ ತೆಗೆದುಕೊಂಡು ಆಯವ್ಯಯದಲ್ಲಿ ಒದಗಿಸಿದ ಹಣದ ಮಿತಿಯಲ್ಲಿ ಅನುದಾನವನ್ನು ಬಿಡುಗಡೆ ಮಾಡಲಾಗುವುದು.

ಚನ್ನಪಟ್ಟಣ ನಗರದಲ್ಲಿ ನೀರಿನ ಪೂರೈಕೆ ಬಗ್ಗೆ

೭೭೬ (೧೩೮೨ ಎ) ಶ್ರೀ ಸಾದತ್ ಅಲಿ ಖಾನ್ (ಚನ್ನಪಟ್ಟಣ).—ಮಾನ್ಯ ಬಂದರು, ಮೀನುಗಾರಿಕೆ, ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ಚನ್ನಪಟ್ಟಣ ನಗರದಲ್ಲಿ ನೀರಿನ ತೊಂದರೆ ಗಂಭೀರವಾದ ಪರಿಸ್ಥಿತಿ ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಮಂಜೂರಾಗಿರುವ ಕೊಳವೆ ಬಾವಿಗಳ ಸಂಖ್ಯೆ ?
ಆ ಪೈಕಿ ಒಟ್ಟು ಕೊರೆದಿರುವ ಕೊಳವೆಬಾವಿಗಳ ಸಂಖ್ಯೆ ?
ಹ್ಯಾಂಡ್ ಪಂಪು ಮತ್ತು ಪವರ್ ಪಂಪುಗಳನ್ನು ಅಳವಡಿಸದೆ ಉಳಿದಿರುವ ಕೊಳವೆ ಬಾವಿಗಳ ಸಂಖ್ಯೆ ?

ಶ್ರೀ ಟಿ. ಎನ್. ನರಸಿಂಹಮೂರ್ತಿ (ಬಂದರು, ಮೀನುಗಾರಿಕೆ, ವಸತಿ ಮತ್ತು ನಗರಾಭಿವೃದ್ಧಿ ಸಚಿವರು).—

ಆ) ಹೌದು.
ಆ) ೨೬
೨೬
೧೦

ಚನ್ನಪಟ್ಟಣದಲ್ಲಿನ ಅಭಿವೃದ್ಧಿ ಕಾರ್ಯಗಳಿಗಾಗಿ ಬಿಡುಗಡೆ ಮಾಡಿರುವ ಅನುದಾನದ ಬಗ್ಗೆ

೭೭೭ (೧೫೮೨ ಬಿ) ಶ್ರೀ ಸಾದತ್ ಆಲಿ ಖಾನ್ (ಚನ್ನಪಟ್ಟಣ).—ಮಾನ್ಯ ಬಂದರು, ಮೀನುಗಾರಿಕೆ, ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗೆ ದಯವಿಟ್ಟು ಉತ್ತರಿಸುವರೇ :—

ಚನ್ನಪಟ್ಟಣದಲ್ಲಿನ ಅಭಿವೃದ್ಧಿ ಕಾರ್ಯಗಳಿಗಾಗಿ ಯಾವುದಾದರೂ ಅನುದಾನವನ್ನು ಬಿಡುಗಡೆ ಮಾಡಲಾಗಿದೆಯೇ ? ಹಾಗಿದ್ದಲ್ಲಿ ಯಾವಾಗ ಬಿಡುಗಡೆ ಮಾಡಲ್ಪಟ್ಟಿದೆ ?

ಶ್ರೀ ಟಿ. ಎನ್. ನರಸಿಂಹಮೂರ್ತಿ (ಬಂದರು, ಮೀನುಗಾರಿಕೆ, ವಸತಿ ಮತ್ತು ನಗರಾಭಿವೃದ್ಧಿ ಸಚಿವರು).—
ಹೌದು, ಮಾರ್ಚ್ ೧೯೯೦.

ಚನ್ನಪಟ್ಟಣ ನಗರದಲ್ಲಿರುವ ಕೊಳಚೆ ಪ್ರದೇಶದ ಬಗ್ಗೆ

೭೭೮ (೧೫೮೨ ಸಿ) ಶ್ರೀ ಸಾದತ್ ಆಲಿ ಖಾನ್ (ಚನ್ನಪಟ್ಟಣ).—ಮಾನ್ಯ ಬಂದರು, ಮೀನುಗಾರಿಕೆ, ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗೆ ದಯವಿಟ್ಟು ಉತ್ತರಿಸುವರೇ :—

ಚನ್ನಪಟ್ಟಣ ಟೌನ್‌ನಲ್ಲಿ ಕೊಳಚೆ ಪ್ರದೇಶವೆಂದು ಘೋಷಿಸಿರುವ ಪ್ರದೇಶಗಳು ಯಾವುವು ? ಕೊಳಚೆ ಪ್ರದೇಶದ ಅಭಿವೃದ್ಧಿಗಾಗಿ ಕೈಗೊಂಡಿರುವ ಕ್ರಮಗಳೇನು ?

ಶ್ರೀ ಟಿ. ಎನ್. ನರಸಿಂಹಮೂರ್ತಿ (ಬಂದರು, ಮೀನುಗಾರಿಕೆ, ವಸತಿ ಮತ್ತು ನಗರಾಭಿವೃದ್ಧಿ ಸಚಿವರು).—

ಚನ್ನಪಟ್ಟಣ ಟೌನ್‌ನಲ್ಲಿ ಕೇಳಕಂಡ ಪ್ರದೇಶಗಳನ್ನು ಕೊಳಚೆ ಪ್ರದೇಶವೆಂದು ಗುರ್ತಿಸಿದೆ :—

೧) ಮೋತಿಮಹಲ್ ಟಾಕೀಸ್ ಬಳಿ
೨) ಕರಬಲ ಮೈದಾನ ಹಿಂಭಾಗದಲ್ಲಿ ರೈಲ್ವೆ ಪ್ಲಾಟ್‌ಫಾರಂ ಬಳಿ
೩) ಹೊಸ ಎ. ಕೆ. ಕಾಲೋನಿ
೪) ಪಬ್ಲಿಕ್ ಸ್ಕೂಡೆಂಟ್ ಹಾಸ್ಟೆಲ್ ಬಳಿ
೫) ಚಿಕ್ಕಮಳೂರು ಮತ್ತು ಹೊಡ್ಡೂರು ರಸ್ತೆ ಸರ್ವೆ ನಂ. ೨
೬) ಇಂದಿರಾ ಕಾಟೇಜ್ ಕೊಳಚೆ ಪ್ರದೇಶ ಆನಂದಪುರಂ
೭) ಪಂಚಾಯಿತಿ ಕಾಲೋನಿ, ಪರಿಜನ ಕಾಲೋನಿ ರಸ್ತೆ
೮) ತುಳಸೀ ತೋಟ ಮೂರ್ತಿಮಹಲ್ ಟಾಕೀಸ್ ಬಳಿ
೯) ಪ್ಲೈಪರ್ಸ್ ಕಾಲೋನಿ ಬಿ.ಇ.ಓ. ಆಫೀಸ್ ಹಿಂಭಾಗ

ಮೇಲಂಡ ೯ ಕೊಳಚೆ ಪ್ರದೇಶಗಳ ಪೈಕಿ, ೭ ಕೊಳಚೆ ಪ್ರದೇಶಗಳಲ್ಲಿ ಮೂಲಭೂತ ಸೌಲಭ್ಯಗಳನ್ನು ರೂ ೯.೭೯ ಲಕ್ಷ ಖರ್ಚು ಮಾಡುವುದರ ಮೂಲಕ ಅಭಿವೃದ್ಧಿ ಪಡಿಸಲಾಗಿದೆ. ಹಣ ಲಭಿಸಿದ ನಂತರ ಉಳಿದ ಕೊಳಚೆ ಪ್ರದೇಶಗಳನ್ನು ಅಭಿವೃದ್ಧಿ ಪಡಿಸಲಾಗುವುದು.